
# ಕಲೆಯ ಪ್ರದರ್ಶನ

ಈ ಹಿಂದೆ ಡಾಂಬರುರಸ್ತೆಯ ಮೇಲೆ ಎದೆಯಲ್ಲಿ ರಾಮಸೀತೆಯರನ್ನು ಬಗೆದು ತೋರಿಸುವ ಹನುಮಂತ, ಚಕ್ರಧಾರಿ ಕೃಷ್ಣ, ಗಣಪತಿ, ಲಕ್ಷ್ಮಿ, ಸರಸ್ವತಿ ಹೀಗೆ ಹಲವು ದೇವರ ಚಿತ್ರಗಳನ್ನು ಬರೆಯುವ ಕಲಾವಿದರಿದ್ದರು. ಜನರ ಓಡಾಟ ಜಾಸ್ತಿ ಇರುವ ರಸ್ತೆಯಲ್ಲಿ ಅವರು ಈ ಚಿತ್ರಗಳನ್ನು ಬರೆಯುತ್ತಿದ್ದರು. ಬಣ್ಣದ ಪುಡಿಗಳಿಂದ ಅಲಂಕೃತರಾದ ದೇವರು ಅವರ ಉಪಜೀವನಕ್ಕೆ ಆಧಾರ. ಚಿತ್ರದ ಮೇಲೆ ಬಿದ್ದ ಚಿಲ್ಲರೆ ಅವರ ದೈನಿಕದ ಗಳಿಕೆಯಾಗಿತ್ತು. ಹಾಗೆ ಬರೆಯಲಾಗುವ ಚಿತ್ರಗಳು ಜನಪ್ರಿಯ ದೇವರಾಗಿದ್ದರು. ಆ ದೇವರು ಎಷ್ಟು ಜನಪ್ರಿಯನೋ ಕಲಾವಿದ ಅಷ್ಟೇ ಅನಾಮಿಕನಾಗಿದ್ದ. ಬಿಳಿಯ ಸೀಮೆಸುಣ್ಣದಿಂದ ಕಪ್ಪುರಸ್ತೆಯ ಮೇಲೆ ನೋಡನೋಡುತ್ತಿದ್ದಂತೆ ದೇವರು ಪ್ರತ್ಯಕ್ಷನಾಗುತ್ತಿದ್ದ; ಭಕ್ತಾದಿಗಳಿಗೆ ದರ್ಶನ ಕೊಡುವಂತೆ ಕಾಣುತ್ತಿದ್ದ. ಹಾಗೆಂದು ಯಾರೂ ರಸ್ತೆ ಮೇಲಿನ ಆ ಚಿತ್ರಗಳಿಗೆ ಕೈ ಮುಗಿಯುತ್ತಿರಲಿಲ್ಲ. ಚಿತ್ರದಲ್ಲಿನ ದೈವಿಕ ಅಂಶ ಅವರನ್ನು ಸೆಳೆಯುತ್ತಿರಲಿಲ್ಲ. ಕಲಾವಿದನ ಕೈಚಳಕ ಅವರಿಗೆ ಮುಖ್ಯವಾಗಿ ಕಾಣುತ್ತಿತ್ತು. ಒಂದು ಊರಿನ ಹಲವು ಬೀದಿಗಳಲ್ಲಿ ಈ ಬೇರೆಬೇರೆ ದೇವರು ತಮ್ಮ ದರ್ಶನ ಕೊಡುತ್ತಿದ್ದರು. ಆ ಊರು ಮುಗಿದ ಮೇಲೆ ಬಣ್ಣದ ಸೀಮೆಸುಣ್ಣ, ಹುಡಿಗಳೊಂದಿಗೆ ಆ ಕಲಾವಿದ ಬೇರೆ ಕಡೆ ಹೋಗುತ್ತಿದ್ದ. ಅಲ್ಲಿ ಕಲೆ ಇರಲಿಲ್ಲ, ಬರೀ ಒಂದುದಿನದ ಜೀವನೋಪಾಯವಿತ್ತು. ಆದರೆ ಕಲೆಯ ಸಣ್ಣ ಸೆಳಕು ನೋಡುಗರನ್ನು ವಿಸ್ಮಯಗೊಳಿಸದೇ ಇರುತ್ತಿರಲಿಲ್ಲ.

ಈ ಕಲಾವಿದರು ಮಾತ್ರವಲ್ಲ, ನಾಟಕದ ಪರದೆ, ತೈಲಚಿತ್ರ ಬರೆಯುವ ಕಲಾವಿದರ ಕಲೆಗೆ ಎಲ್ಲರಿಗೂ ನೋಡಬಹುದಾದ ಸಾರ್ವಜನಿಕ ಆಯಾಮವಿತ್ತು. ಇವಷ್ಟೇ ಅಲ್ಲ, ಇಡೀ ಭಾರತೀಯ ಚಿತ್ರಕಲೆಯೇ ಸಮೂಹವನ್ನು ಒಳಗೊಂಡಿದ್ದು. ಆದರೆ, ಈಗಿನ ಆಧುನಿಕಶೈಲಿಯ ಕಲಾವಿದರ ಚಿತ್ರಗಳು ಆಸಕ್ತರಿಗೆ ನೋಡಲು ಸುಲಭವಾಗಿ ಸಿಗುವುದಿಲ್ಲ. ಅವರ ಕಲಾಕೃತಿಗಳ ಪ್ರದರ್ಶನ ದೊಡ್ಡ ಗ್ಯಾಲರಿಗಳಲ್ಲಿ ನಡೆಯುತ್ತದೆ. ನಗರಗಳಲ್ಲಿ ನಡೆಯುವ ಆ ಪ್ರದರ್ಶನಗಳಿಗೆ ಎಲ್ಲರಿಗೂ ಹೋಗಲಾಗುವುದಿಲ್ಲ. ಆ ಕ್ರಿಯಾಶೀಲ ಕೃತಿಗಳು ಅನೇಕರ ಕಣ್ಣಿಗೆ ಬೀಳದೇ ಆಸ್ತಿಯಾಗಿ ರೂಪಾಂತರಗೊಂಡು ಖಾಸಗಿ ಸಂಗ್ರಹ ಸೇರುತ್ತವೆ. ಇಲ್ಲವೇ, ಉಳ್ಳವರ ಮನೆಯ ಅಲಂಕಾರವಾಗುತ್ತವೆ. ಅವು ಜನರಿಂದ, ಅವರ ಪ್ರತಿಸ್ಪಂದನದಿಂದ ದೂರವಾಗುತ್ತವೆ. ಕಲಾಕೃತಿಗಳಿಗೆ ಸಂಬಂಧಿಸಿದಂತೆ ಅವನ್ನು ಎಲ್ಲರೂ ನೋಡಿ ಆಸ್ವಾದಿಸಬಹುದಾದ ಮುಕ್ತ ಅವಕಾಶ ಮೊದಲಿನಿಂದಲೂ ಕಡಿಮೆಯೇ. ಕೆಲವು ಕಲಾವಿದರು ಮಾರುಕಟ್ಟೆಯನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಬಿಕರಿಯಾಗುವ ವಸ್ತುವಿನ ಲಘುಶೈಲಿಯ ಚಿತ್ರಗಳನ್ನಷ್ಟೇ ಮಾಡುತ್ತಾರೆ. ನಮ್ಮಲ್ಲಿ ಅನೇಕರಿಗೆ ಕಲಾವಿದರ ಹೆಸರು ಗೊತ್ತೇ ಹೊರತು, ಅವರ ಕಲೆಯಲ್ಲ. ಜನರಿಗೆ ತಮ್ಮ ಕಲೆಯನ್ನು ಮುಟ್ಟಿಸಬೇಕಾದ ದಾರಿಗಳನ್ನು ಕಲಾವಿದರೂ ಕಂಡುಕೊಳ್ಳಬೇಕಿದೆ. ಇಲ್ಲದಿದ್ದರೆ ಹಾದಿಯ ಮೇಲೆ ಚಿತ್ರ ಬರೆಯುವ ಕಲಾವಿದನಿಗೂ ಕ್ಯಾನ್‌ವಾಸ್ ಮೇಲೆ ಚಿತ್ರ ಬರೆಯುವ ಕಲಾಕೋವಿದನಿಗೂ ಅಂಥ ಫರಕು ಉಳಿಯಲಾರದು.



**ಸಂದೀಪ ನಾಯಕ**